ಗೋಪಾಲಕೃಷ್ಣ ಪೈ ಮೂಲತಃ ಕಾಸರಗೋಡಿನ ಪೆರ್ಲದವರು, ಪ್ರಸ್ತುತ ಬೆಂಗಳೂರು ನಿವಾಸಿ. 'ತಿರುವು', 'ಈ ಬೆರಳ ಗುರುತು', 'ಹಾರುವ ಹಕ್ಕಿಯ ಗೂಡಿನ ದಾರಿ' ಅವರ ಕಥಾಸಂಕಲನಗಳು. 'ಸ್ವಪ್ನ ಸಾರಸ್ವತ' ಪ್ರಸಿದ್ಧ ಕಾದಂಬರಿ. 'ಆಧುನಿಕ ಚೀನಿ ಸಣ್ಣಕಥೆಗಳು', 'ಚೆಕೋವನ ಕೊನೆಯ ದಿನಗಳು', 'ಮೋ ಯಾನ್‌ನ ಕಥೆಗಳು', 'ಮಹಾತ್ಮನಿಗಾಗಿ ಕಾಯುತ್ತ' ಅನುವಾದಿತ ಕೃತಿಗಳು.

ಹಾಗೆ ಜಾಗ್ರತೆಯಾಗಿ ಅದನ್ನು ಇಟ್ಟುಕೊಂಡಿದ್ದೇವೆ' ಎಂದಳು.

ನಾಳೆ ಶನಿವಾರ. ತುಂಬ ಜನರು ಬರಬಹುದು ಎಂದುಕೊಂಡ ಒಲಿವೈರಾ. ಮರುದಿನ ಒಬ್ಬಾತ ತನ್ನ ಚಿಕ್ಕ ಮಗಳೊಂದಿಗೆ ಲಿಮೋಸಿನ್ ಕಾರಿನಲ್ಲಿ ಬಂದ. ಇವರ ಸಾಧಾರಣ ಮನೆಯನ್ನು ನೋಡಿ ಒಳಗೆ ಹೋಗುವುದು ನಿಷ್ಪ್ರಯೋಜಕ ಎಂದುಕೊಂಡ. ಆದರೂ ಬಾಗಿಲ ತನಕ ಬಂದು ಪಿಯಾನೊದ ನಿರ್ಮಾಣ ವಿವರ, ಹಾಗೂ ತಯಾರಾದ ಇಸವಿ ಎಲ್ಲ ವಿಚಾರಿಸಿದ.

'ವಂದನೆಗಳು. ನನಗೆ ಅದನ್ನು ನೋಡೋ ಅಗತ್ಯವಿಲ್ಲ. ಅದು ಹೊಸದಾಗಿರಬಹುದೆಂದು ಊಹಿಸಿದ್ದೆ. ಒಳ್ಳೆಯದಾಗಲಿ...' ಯಾವ್ಹೋ ಅದನ್ನೊಮ್ಮೆ ನೋಡಿ ಎಂದು ಒತ್ತಾಯಿಸಿದರೂ ಕೇಳದೇ ಹೇಳಿದ. ಹಾಗೂ ಹೊರಟೂ ಹೋದ.

ಯಾವ್ಹೋನಿಗೆ ತುಂಬಾ ದುಃಖವಾಯಿತು. ಪಿತ್ರಾರ್ಜಿತವಾಗಿ ಆ ಪಿಯಾನೊ ಅವನ ಕೈಗೆ ಬಂದ ದಿನದಿಂದಲೂ ಅವನು ಜತನದಿಂದ ನೋಡಿಕೊಂಡಿದ್ದ. ಎಂದೂ ಅದನ್ನು ಮಾರಬೇಕೆಂದು ಊಹಿಸಿರಲಿಲ್ಲ. ಎಲ್ಲಕ್ಕಿಂತ ಕೆಟ್ಟದ್ದೆಂದರೆ ಯಾರೂ ಅದನ್ನು ಬೆಲೆ ಬಾಳಬಲ್ಲುದೆಂದು ಪರಿಗಣಿಸಿರಲಿಲ್ಲ. ಯಾರೂ ಅದರ ಮೌಲ್ಯವನ್ನು ನಿಷ್ಕರ್ಷಿಸಿರಲಿಲ್ಲ.

'ಯಾರೂ ಸಹ, ಬಹುಶಃ ಭಾನುವಾರ ಬಂದ ವ್ಯಕ್ತಿಯೊಬ್ಬನನ್ನು ಬಿಟ್ಟು.'

'ನಿಜವಾಗಲೂ ಅವನು ಹೇಳುತ್ತಿರುವುದು ಪ್ರಾಮಾಣಿಕತೆಯಿಂದಲೇ?' ಎಂದವನು ರೊಸಾಲಿಯನನ್ನು ಕೇಳಿದ.

'ಆತ ಕುಚೇಷ್ಟೆ ಮಾಡುತ್ತಿದ್ದಾನೆಂದು ಕಾಣುತ್ತದೆ' ಎಂದುತ್ತರಿಸಿದಳವಳು.

'ಗೊತ್ತಿಲ್ಲ. ಬಹುಶಃ ಹಾಗಿರಲಾರದು.'

ಮೊದಲು ಆಸೆ ಕಳೆದುಕೊಂಡವಳು ರೊಸಾಲಿಯ. ಗಂಡ ಕೆಲಸದಿಂದ ಮರಳಿದಾಗ ಅವನ ಒದ್ದಾಟವನ್ನು ಪರಿಹರಿಸುವುದೇ ಅವಳ ಮೊದಲ ಕಾಳಜಿಯಾಗಿತ್ತು.

'ಇವತ್ತು ಎಷ್ಟು ಜನರು?'

'ಒಬ್ಬರೂ ಇಲ್ಲ. ಎರಡು ದೂರವಾಣಿ ಕರೆಗಳು. ಅವರು ಹೆಸರು ಹೇಳಲಿಲ್ಲ. ಆದರೆ, ಬಂದು ನೋಡಿ ಹೋಗುತ್ತೇವೆ ಎಂದರು.'

ಮೆತ್ತಗೆ ಹೇಳಿದ ಆಕೆಯ ಧ್ವನಿ ಸಮಾಧಾನಪಡಿಸುವಂತಿತ್ತು.

'ಆ ಕೆಂಚುಗೂದಲಿನವನ ಕಥೆ ಏನು?'

'ಮತ್ತೆ ಬರುತ್ತಾನೆ ಎಂಬ ನಂಬಿಕೆಯಿದೆ ನನಗೆ.'

ತುಂಬ ದಿನಗಳ ತನಕ ಒಬ್ಬರೂ ಬರಲಿಲ್ಲ. ದೂರವಾಣಿ ಕರೆಗಳೂ ಇಲ್ಲ. ಯಾವ್ಹೋ ದೆ ಒಲಿವೈರಾನ ಪಾಡು ರೈಲು ಮಿಸ್ ಮಾಡಿಕೊಂಡ ಗೆಳೆಯನೊಬ್ಬನ ಪರಿಯಂತಾಗಿತ್ತು. ಆ ಗೆಳೆಯನ ಬಗ್ಗೆ ವಿಷಾದ, ಆದರೆ ಅವನ ಜೊತೆ ಇನ್ನೂ ಸ್ವಲ್ಪ ಹೊತ್ತು ಇರಬಹುದಲ್ಲ ಅಂತ ಸಂತೋಷ. ಯಾವ್ಹೋ ಪಿಯಾನೊದ ಬಳಿ ಕುಳಿತು ಅದರೊಡನಿರಬಹುದಾದ ಕೊನೆಯ ಗಳಿಗೆಗಳ ಖುಷಿಯನ್ನು ಅನುಭವಿಸಿದ. ಅದರ ಗಾಂಭೀರ್ಯ, ನಿಲುವಿನ ಬಗ್ಗೆ ಹೆಮ್ಮೆ ಪಟ್ಟ. ಅದನ್ನೇ ಕುರಿತು ಯೋಚಿಸಿದ. ಮೂರು ತಲೆಮಾರುಗಳ ಕಾಲ ಅದನ್ನು ನುಡಿಸಿದ್ದರು. ಎಷ್ಟು ಜನರ ಕನಸುಗಳನ್ನೋ ನಾಟ್ಯವನ್ನೋ ಅದು ಪ್ರೇರೇಪಿಸಿತ್ತೊ! ಎಲ್ಲರೂ ಹೋಗಿಬಿಟ್ಟಿದ್ದರು. ಅದು ಮಾತ್ರ ಉಳಿದಿತ್ತು. ತನ್ನ ಪೂರ್ವಜರ ಅಸ್ಮಿತೆಯನ್ನು ಹೇಳುವ ಏಕೈಕ ಸಾಧನ. ಒಂಥರ ಶಾಶ್ವತ ನೆನಪು. ಅದು ಮತ್ತು ಮಹಡಿಯ ಮೇಲಿದ್ದ ಪ್ರಾರ್ಥನಾ ಮಂದಿರ.

'ಸಾರಾ, ಒಂದು ಶಾಪಿನ್ ನ ಸಂಗೀತದ ಒಂದು ತುಣುಕನ್ನು ನುಡಿಸಮ್ಮ, ನಿನಗೆ ನೆನಪಿದೆಯೋ ನೋಡು.'

'ಇಲ್ಲಪ್ಪ, ನನ್ನಿಂದಾಗಲ್ಲ. ಆ ಪಿಯಾನೊದ ಸ್ವರ